ಮಾತು-ಕತೆ

# ರಂಗಭೂಮಿ ನನ್ನೊಳಗಿನ ಲೇಖಕಿಯನ್ನು ಬಡಿದೆಬ್ಬಿಸಿತು

## ಬೂಕರ್ ಪ್ರಶಸ್ತಿ ಪುರಸ್ಕೃತ ಕಾದಂಬರಿಗಾರ್ತಿ ಗೀತಾಂಜಲಿ ಶ್ರೀ ಸಂದರ್ಶನ

ಸಂದರ್ಶನ: **ಜಗದೀಶ ಅಂಗಡಿ**



ಜಾಗತಿಕ ಸಾಹಿತ್ಯಕ್ಕೆ ನೀಡುವ ಪ್ರತಿಷ್ಠಿತ ಪ್ರಶಸ್ತಿ 'ಇಂಟರ್‌ನ್ಯಾಷನಲ್ ಬೂಕರ್ ಪ್ರೈಜ್' ಹಿಂದಿ ಕಾದಂಬರಿಗಾರ್ತಿ ಗೀತಾಂಜಲಿ ಶ್ರೀ ಅವರ 'ಟೊಂಬ್ ಆಫ್ ಸ್ಯಾಂಡ್' (ಮೂಲದಲ್ಲಿ 'ರೆತ್ ಸಮಾಧಿ')ಗೆ ಸಂದಿದೆ. ಈ ಪ್ರಶಸ್ತಿ ಪಡೆದ ಪ್ರಥಮ ಭಾರತೀಯ ಸಾಹಿತಿ ಎಂಬ ಹೆಗ್ಗಳಿಕೆ ಅವರದು. ಪ್ರಸ್ತುತ ದೆಹಲಿಯಲ್ಲಿರುವ ಅವರು ಉತ್ತರ ಪ್ರದೇಶದವರು. ಹುಟ್ಟಿದ್ದು ಜೂನ್ 12, 1957ರಂದು. ಹಿಂದಿಯಲ್ಲಿ ಕಾದಂಬರಿ ಹಾಗೂ ಸಣ್ಣಕತೆ ಪ್ರಕಾರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಅವರು ಇಂಗ್ಲಿಷ್‌ನಲ್ಲೂ ಬರೆಯುತ್ತಾರೆ.

ಈ ತನಕ 'ಮಾಯಿ' (1993), 'ಹಮಾರಾ ಶಹರ್ ಉಸ್ ಬರಸ್' (1998), 'ತಿರೋಹಿತ್' (2001), 'ಖಾಲಿ ಜಗಹ್' (2006), ಹಾಗೂ 'ರೆತ್ ಸಮಾಧಿ' (2018) – ಕಾದಂಬರಿಗಳನ್ನು ಹಾಗೂ ಅನೇಕ ಸಣ್ಣಕತೆಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕಾದಂಬರಿ ಹಾಗೂ ಕತೆಗಳು ಇಂಗ್ಲಿಷ್, ಜರ್ಮನ್, ಸೈಬಿರಿಯಾ, ಪೊಲಿಶ್, ಝೆಕ್, ಫ್ರೆಂಚ್ ಹಾಗೂ ಭಾರತದ ಅನೇಕ ಭಾಷೆಗಳಿಗೆ ಅನುವಾದಗೊಂಡಿವೆ.

ರಂಗಭೂಮಿಯ ಬರವಣಿಗೆಯಲ್ಲೂ ಸಕ್ರಿಯವಾಗಿರುವ ಗೀತಾಂಜಲಿ ಶ್ರೀ ದೆಹಲಿಯ ಹವ್ಯಾಸಿ ರಂಗತಂಡ 'ವಿವಾದಿ'ಯ ಸ್ಥಾಪಕ ಸದಸ್ಯರಲ್ಲೊಬ್ಬರು. ಈ ತಂಡದ ನಾಟಕಗಳು ಭಾರತದೆಲ್ಲೆಡೆ ಹಾಗೂ ವಿದೇಶಗಳಲ್ಲೂ ಪ್ರದರ್ಶನಗೊಂಡಿವೆ. ಯೂರೋಪ್ ಹಾಗೂ ಏಷ್ಯಾ ಖಂಡಗಳ ದೇಶಗಳಲ್ಲಿ ಆಯೋಜಿಸಲ್ಪಟ್ಟ ಜಾಗತಿಕ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಭಾಗವಸಿದ್ದಾರೆ. ಗೀತಾಂಜಲಿ ಅವರ ಕೃತಿಗಳು ಯೂರೋಪ್, ಅಮೆರಿಕ ಹಾಗೂ ಇಂಗ್ಲೆಂಡ್ ದೇಶಗಳ ಪ್ರಸಿದ್ಧ ವಿಶ್ವವಿದ್ಯಾಲಯಗಳ ಉನ್ನತ ಶಿಕ್ಷಣದ ಪಠ್ಯಗಳಲ್ಲಿ